Regd No B G 155 Sri 22—6—1965

ಸತ್ಯವಾದಿ

48th Year
Satyavadi
DAILY
MYSORE 4

ಸಂಪಾದಕರು — ಆರ್.ನಿರಂಜನಾರಾಧ್ಯ ಎಂ ವಿ ಸುಬ್ಬರಾಯುರು ಸಂಪಾದಕರ — ಧರ್ಮಪ್ರಚಾರನಿರತ ಎಂ.ಎಸ್ ಕೃಷ್ಣರಾವ್ 2

ಸಮಾಚಾರ ಸಂಗ್ರಹ

★

ಪ್ರಧಾನಿಗಳು ನವದೆಹಲಿಗೆ ತಾ|| 27 ರಂದು ವಾಪಸ್ಸಾಗುವರೆಂದು ದೆಹಲಿ ವಾರ್ತೆ ತಿಳಿಸಿತ್ತದೆ.

ಅಲ್ಜೀರ್ಸ್ — ಅಧ್ಯಕ್ಷ ಬೆನ್ ಬೆಲ್ಲಾ ಓಡಿಸಲ್ಪಟ್ಟು ಎರಿಬರಿ ಅಧಿಕಾರ ವಹಿಸಿಕೊಂಡಿದೆ : ಬೆನ್ ಬೆಲ್ಲಾ ಬಗ್ಗೆ ಇನ್ನೂ ಏನೂ ತಿಳಿದಿಲ್ಲ.

ಜನಸಂಖ್ಯೆ ಹತೋಟಿಗೆ ನ್ಯಾಯಸಮ್ಮತ ಗರ್ಭಪಾತ ಅವಶ್ಯವೆಂದು ಬೊಂಬಾಯಿನಲ್ಲಿ ಭಾರತ ವಿದ್ಯಾಮಂತ್ರಿ ಚಾಗಲ್ಲಾ ಹೇಳಿದರು.

ಭಾರತ ರಕ್ಷಣಾ ನಿಬಂಧನೆಯಂತೆ ಬಂಧಿಸಲ್ಪಟ್ಟಿರುವವರ ವಿಚಾರಣೆ ನಡೆಸಲ್ಪಡಬೇಕೆಂದು ಶ್ರೀ ಎಸ್ ಸಿ ಚಟರ್ಜಿ ಹೇಳಿದರೆಂದು ವಿಜಯವಾಡಾ ವಾರ್ತೆ ತಿಳಿಸಿತ್ತದೆ.

ಕೇರಳ ಗವರ್ನರು ಆ ಪದವಿ ತ್ಯಜಿಸಿದ ಏರ್ಪಾಟಿನ ತೆಂಗಳಿಂದ ಸಂಬಳ ತೆಗೆದುಕೊಂಡಿಲ್ಲವೆಂದೂ, ತಮ್ಮ ಸ್ನೇಹಿತರ ಬಳಿಗೆ ತಮ್ಮ ಹಣವನ್ನೆ ಬಳಸುತ್ತಿರುವರೆಂದೂ ತಿರುವೇಂದ್ರಮಿನ ವರ್ತಮಾನ.

ಬೊಮ್ಮಾಯಿ ಸರ್ಕಾರ ಸುದ್ದಿ ಇದು — ಭಾಷಾ ಸನ್ಮಯ ಮೇಲೆ ಕಾಂಗ್ರೆಸ್ ಸ್ಸು 1967 ರಚನೆಯಲ್ಲಿ ಸ್ಪರ್ಧಿಸಲಿದೆಯೆಂದು ಕಾಂಗ್ರೆಸ್ ಅಧ್ಯಕ್ಷ ಕಾಮರಾಜರು ಹೇಳಿದರು

ಬಂದ್ರಗ್ರಹದಲ್ಲಿ ಕಾಲಿಡುವ ಮಾನವ ನಿಸರ್ಗದಿಂದ ಮುಚ್ಚಿಹೋಗುವುದೆಂದೂ ಅಲ್ಲಿ ವಿಜ್ಞಾನಿಗಳು ಕಂಬಳಿಯಂಥಾದ್ದನ್ನು ಹಾಸಲ್ಪಟ್ಟಿರುವುದೆಂದೂ ಲಂಡನ್ನಿನ ಖಗೋಳವಿಜ್ಞಾನಿ ಅಭಿಪ್ರಾಯ ವ್ಯಕ್ತಪಡಿಸಿರುವರು

ನಾಳೆಯ ಪಂಚಾಂಗ

ದೈವಜ್ಞ ಶಿಖಾಮಣಿ
ಉಪಾಧ್ಯಾಯ ಮಹಾವಿದ್ವಾನ್ ಧರ್ಮಾಧಿಕಾರಿ
ಡಾ|| ಕಾರಿಮ್ಯಾಕಕ್ಕ ಜ್ಯೋತಿಷ್ವಿದ್ವನ್ಮಣಿ
ಸಂಪತ್ಕೃಷ್ಣ-ಜೋಯಿಸ ಪಂಚಾಂಗ
22 ಜೂನ್ ಮಂಗಳವಾರ ಸಮಸ್ತ ರೇವತಿ

ನೆರವಿನಲ್ಲಿ ಮೋಸ

ಲಂಡನ್ — ಪಶ್ಚಿಮ ಜರ್ಮನಿಯು ಭಾರತಕ್ಕೆ ನೀಡಲಿದ್ದ ನೆರವಿನಲ್ಲಿ 30 ಲಕ್ಷ ಡಾಲರು ಮೋಸ ಮಾಡಿರುವುದನ್ನು ಇದು 1965 ರ ಅತಿ ಹೀನ ಕಾರ್ಯ ಎಂದು ಫೈನಾನ್ಷಿಯಲ್ ಟೈಮ್ಸ್ ಪ್ರಕಟಿಸಿದೆ.

❋

ಭಾರತ ಸಾಲಾ ಎತ್ತುವುದು

ಬೊಂಬಾಯಿ — ಭಾರತಸರ್ಕಾರ 250 ಕೋಟಿ ರೂಗಳ ಸಾಲಾ ಎತ್ತುವುದಾಗಿ ಪ್ರಕಟಿಸಿದೆ : ಜುಲೈ 1 ರಿಂದ 3 ದಿವಸಗಳಿಗೆ ದಂಪಾಸ್ತುಗಳು ಸ್ವೀಕರಿಸಲಾಗುವುದು.

★

ಕಳ್ಳ ಧನ

ಮೋಟಾರು ವಾಹನಗಳ ವಿಭಾಗಗಳ ಮೂರಾಟಗಾರರೋರ್ವರ ಮನೆಯನ್ನು ದಕ್ಷಿಣ ಕಲ್ಕತ್ತಾದಲ್ಲಿ ನಿನ್ನೆ ಸಂಚರದ ಅಧಿಕಾರಿಗಳು ಶೋಧಿಸಲು ರೂ 3ಲಕ್ಷ 65 ಸಾವಿರ ಕಾಳ ಹಣ ದೊರೆಯಿತು.

ವಿಯೆಟ್ನಾಂ

ವಿಯೆಟ್ನಾಮಿನ ಯುದ್ಧಕ್ಕೆ ಶಾಂತಿ ಪರಿಹಾರ ಹುಡುಕಲು ನಾಲ್ಕು ರಾಜ್ಯಗಳ ಕಾರ್ಯನ್ವೆಲ್ಲು ನಿಯೋಗವನ್ನು ಪ್ರಧಾನಿ ಶ್ರೀ ಎಲ್ ಬಿ ಶಾಸ್ತ್ರಿ ಯವರಲ್ಲಿ ನಿನ್ನೆ ಬರಮಾಡಿಸಿದರು.

ಅರೋಪ

ಕಾಶ್ಮೀರ ಶಾಂತಿ ಒಪ್ಪಂದವನ್ನು ಭಾರತ ತೀವ್ರವಾಗಿ ಭಂಗಪಡಿಸಿದೆ ಎಂದು ಪಾಕಿಸ್ತಾನ ಆರೋಪಿಸಿದೆ.

ಬಂಧನ

ಅಲ್ಜೀರಿಯಾದಲ್ಲಿ ಬೆನ್‌ಬೆಲ್ಲ ಸಂಗಡಿಗರನ್ನು ಖಾಯಮ್ಮಾಹಿಕವಾಗಿ ಬಂಧಿಸಲಾಗುತ್ತಿದೆ

ಕಮ್ಯೂನಿಸ್ಟು ಡೆಟನೂಗಳ ಉಪವಾಸ ಸತ್ಯಾಗ್ರಹ

❋

ಮರಣ ದಂಡನೆ

ಗಲ್ಲಿನ ಶಿಕ್ಷೆ ವಜಾ ಮಾಡಬೇಕೆಂಬ ಸೂಚನೆಯು ವಿರುದ್ಧ ರಾಜ್ಯಗಳು ಬಲವಾದ ವಿರೋಧ ವ್ಯಕ್ತಮಾಡಿರುವದಾಗಿನವ ದೆಹಲಿ ವಾರ್ತೆ ತಿಳಿಸುತ್ತದೆ ಕೇಂದ್ರದ ಕೋರಿಕೆಯ ಮೇಲೆ ಈ ವಿಚಾರ ಪರಿಶೀಲಿಸಿದ ಲಾ ಕಮಿಷನ್ ಈ ವಿಚಾರ ಕೈಬಿಡುವ ಸಂಭವವಿದೆ

ಶಾಂತಿ ವಿಷನ್ನಿನ ಹಬ್ಬಾಂದಲ್ಲಿ

ವಿಯೆಟ್ನಾಮಿನ ವಿಚಾರದಲ್ಲಿ ಕಮ್ಯೂನಿಸ್ಟರು ನಾಲ್ಕು ದೇಶಗಳ ಕಾರ್ಯನ್ವೆಲ್ಲು ಪ್ರಧಾನಿಗಳ ನಿಯೋಗದ ಬಗ್ಗೆ ಯಾವ ಧೋರಣೆ ತಾಳುವರೋ ಅದರ ಮೇಲೆ ಅವಲಂಬಿತವಾದ ವರ್ತನೆ ನಿಲ್ಲುವುದು ಎಂದು ವಾಷಿಂಗ್ಟನ್ನಿನ ವಾರ್ತೆ

★

ಅಫ್ರೋ-ಏಷ್ಯಾ ಸಮ್ಮೇಳನ

ಅಲ್ಜೀರ್ಸಿನಲ್ಲಿ ನಡೆಯಬೇಕಾಗಿರುವ ಅಫ್ರೋ-ಏಷ್ಯ ಸಮ್ಮೇಳನ ಮುಂದುವರಿಯಬೇಕೆಂದು ಅಫ್ರೋ-ಏಷ್ಯ ಕಾರ್ಯದರ್ಶಿಗಳು ಜಂಟಿ ಕರೆ ನೀಡಿದೆ ಎಂದು ಲಂಡನ್ನಿನಿಂದ ಬಂದಿದೆ.

ಪೂರ್ವ ಪಾಕಿಸ್ತಾನಕ್ಕೆ ಬೇಕಾದ್ದು —

ಪೂರ್ವ ಪಾಕಿಸ್ತಾನಕ್ಕೆ ಸ್ವಪರಿಪಕ್ಷ ಮತ್ತು ಆರ್ಥಿಕ ಸ್ವಾತಂತ್ರ್ಯ ಬೇಕೆಂಬುದಾಗಿ ಮೂವತ್ತು ಮಂದಿ ಪಾಕಿಸ್ತಾನಿಗಳು ಲಂಡನ್ನಿನಲ್ಲಿ ಪ್ರದರ್ಶನ ಮಾಡಿದರು ಅಯೂಬ ಖಾನರ ವಿದೇಶ ನೀತಿ ಹೊಲಸೆಂದು ಕೆಲವರು ಪ್ರದರ್ಶನವಾಡಿದರು.

ಶಿವನೇಂದ್ರಂ — ಎಳೆ ಗೋವಾಲನ್ ಮುಂತಾದ ಮಾನು ಕಮ್ಯೂನಿಸ್ಟು ಡೆಟನೂಗಳ 138 ಮಂದಿ ತಮ್ಮ ಕೇಳಿಕೆಗಳನ್ನು ಒತ್ತಾಯಮಾಡಲು ನಿನ್ನೆ ಉಪವಾಸ ಸತ್ಯಾಗ್ರಹ ನಡೆಸಿದರು — ಇದರ ಸಹಾನುಭೂತಿಗಾಗಿ ಕೇರಳದ ವಿವಿಧ ಸ್ಥಳಗಳಲ್ಲಿ 3 ಸಹಸ್ರಕ್ಕೂ ಹೆಚ್ಚು ಮಂದಿ ಉಪವಾಸ ಆಚರಿಸಿದರು — ಸೆಕ್ರಿಟೇರಿಯಟ್ಟು ಮುಂದೆ 200 ಕ್ಕೂ ಹೆಚ್ಚು ಮಂದಿ. ಕಮ್ಯೂನಿಸ್ಟು ಡೆಟನೂಗಳ ಬಿಡುಗಡೆಗೆ ಮತ್ತು ಅವರ ಬಗ್ಗೆ ಉತ್ತಮ ನೀತಿಯು ನಡವಳಿಕೆಗೆ ಒತ್ತಾಯ ಮಾಡಲು ಪ್ರದರ್ಶನ ನಡೆಸಿದರು — ಗವರ್ನರು ಶ್ರೀ ಜೈಸರು ಸೆಕ್ರಿಟೇರಿಯಿಟ್ ಆಫೀಸಿಗೆ ಬರುತ್ತಿದ್ದಾಗ ಗೇಟು ಹತ್ತಿರ ಖುತ್ತೀಪತ್ರ ಹಿಡಿದು ತಮ್ಮ ಕೇಳಿಕೆಗಳನ್ನು ಮಂಡಿಸಿದರು.

★

ಗೋಕರ್ಣ ಬಾರು

ಸಿಲೋನಿಂಗಿನಿಂದ ಬಂದಿರುವ ವಾರ್ತೆ ಪ್ರಕಾರ ಲಬೆತಿಲ್ಲ-ಡುಮಾಬಾರಿ ಪ್ರದೇಶದಲ್ಲಿ ಪಾಕಿಸ್ತಾನ ಗುಂಡುಹಾರಿಸಿದೆ.

ಗೋವಾ ಮಾತೆಕ್ಕದರೆ

ಬೆಂಗಳೂರು — ಗೋವಾದ ಮಾತೆಕ್ಕಿದರೆ ಬೈಸೂರು ಮತ್ತು ಮಹಾರಾಷ್ಟ್ರಗಳ ಪಾಲಾಗ್ವಾದ ಜಿಲ್ಲೆಯು : ಈಗ ಗೋವಾವನ್ನು ಮಹಾರಾಷ್ಟ್ರದ ಪೋಟುರಿಗೆ ಸೇರಿಸಬೇಕೆಂದು ಯೋಜಿಸಲಾಗಿರುವದನು ಪ್ರತಿಭಟಿಸಿ ಬೈಸೂರಿಗೆ ಸೇರಬೇಕೆಂದು ಬೆಂಗಳೂರು ರೋಟರಿ ಕ್ಲಬ್ಬಿನ ಅನೇಕ ಸದಸ್ಯರು ತಿಳಿಸಿದ್ದಾರೆ.

ಪನ್ನಗೆ

ಅಲ್ಜೀರ್ಸಿನ ಹೊಸ ಪಂಚಾಂಗೆ ಭಾರತ ಮತ್ತು ಬ್ರಿಟನು ಪನ್ನಗೆ ಇತ್ತಿನೆ.

ಭಾಷಾ ಸಮಸ್ಯೆಗೊಂದು 'ರಾಮಬಾಣ'

—೦—

(ಮುಂದುವರಿದುದು)

ತಾಯಿಗೆ ಎಂಡು ಬಗೆಯುವುದುಂಟೆ ? ಎಂದಿಗೂ ಇಲ್ಲ ; ಏಕೆಂದರೆ ಎಲ್ಲ ಭಾಷೆಗಳಲ್ಲಿ ಶೇ 40, 50, 60, 70, 80 ಭಾಗ ಸಾಂಸ್ಕೃತದ ಭಾಗ ಹೀಗೆ ಸಂಸ್ಕೃತದ ಪ್ರಭಾವವಿರುವುದೇ ಕಾರಣ : (ಪ್ರಭಾವವಿಲ್ಲವೆಂದು ಯಾವ ಪಂಡಿತ ಸಹ ಸವಾಲು ಹಾಕಿಲ್ಲ) ಸಂಸ್ಕೃತ ಭಾಷೆಯನ್ನು ಬಳಸಿ ಬೇಗ ಅಜಾಗೆಗೆ ತರಬಹುದು ; ಏಕೆಂದರೆ ಅದು ಬೂದಿ ಮುಚ್ಚಿದ ಕೆಂಡ, ಅಷ್ಟೇ ಹೊಂತಕ, ಬೆಂಕಿಯನ್ನು ಹೊಸದಾಗಿ ಹುಟ್ಟಿಸಬೇಕಾಗಿಲ್ಲ ಸ್ವಲ್ಪ ಬೂದಿ ಊದುವ ಪ್ರಯತ್ನ ಮಾಡಿದರೆ ಸಾಕು, ಬೆಂಕಿಯು ಜ್ವಾಲೆ ಪ್ರಜ್ವಲಿಸುತ್ತದೆ : ಸಂಸ್ಕೃತ ಪ್ರಭಾವವಿಲ್ಲದಿರುವ ಪ್ರಶ್ನೆಯಲ್ಲಿ ಭಾರತೀಯ ಹನ್ನೆರಡು ಭಾಷೆಗಳೂ ಕಣ್ಣು ಕಿತ್ತ ಮನುಷ್ಯನಂತಾಗಿದ್ದವು : ಅಷ್ಟೇಅಲ್ಲದೆ ಪ್ರಪಂಚದ ಭಾಷೆಗಳ ಮೇಲೆಲ್ಲಾ ಪ್ರಭಾವ ಬೀರಿರುವ ಭಾಷೆಯನ್ನು ಏಕೆ ನಮ್ಮ ರಾಷ್ಟ್ರಭಾಷೆಯಾ ಘೋಷಿಸಬಾರದು ?

ಸಂಸ್ಕೃತ ಭಾಷೆಯನ್ನು ರಾಷ್ಟ್ರಭಾಷೆಯನ್ನಾಗಿ ಘೋಷಿಸಿದರೆ ಅದರಿಂದ ಅಡಚಣೆ ನಡೆಯಲು ಸಾಧ್ಯವಿಲ್ಲ, ಅದು ಸತ್ತ ಭಾಷೆ (dead language) (ನಾವು ಅದಕ್ಕೆ ಸತ್ತಿದ್ದೇವೆ ಅಷ್ಟೆ) ಎಂದು ಆಕ್ಷೇಪಿಸಬಹುದು ; ಆ ಆಕ್ಷೇಪಕ್ಕೆ ಒಂದು ಸುಂದರವಾದ ಉದಾಹರಣೆಯಿದೆ : ಇಸ್ರೇಲ್ ರಾಷ್ಟ್ರವು ರಾಷ್ಟ್ರವು (ನಮ್ಮ ಸಂಸ್ಕೃತದಂತಿದ್ದ) ಹೀಬ್ರೂ ಭಾಷೆಯನ್ನು ತನ್ನ ರಾಷ್ಟ್ರ ಭಾಷೆಯಾಗಿ ಘೋಷಿಸಿ ಕೇವಲ ಒಂದೇ ಒಂದು ದಶಕದಲ್ಲಿ ವಿಜ್ಞಾನ ಇತ್ಯಾದಿಗಳಲ್ಲಿ ಅಗ್ರಸ್ಥಾನವನ್ನು ಗಳಿಸಿಲ್ಲವೇ ? ಹೀಬ್ರೂ ಭಾಷೆ ಸತ್ತೇಇಲ್ಲ ; ಅದರೆ ಸಂಸ್ಕೃತ ಸತ್ತಿಲ್ಲ ; ಸಂಸ್ಕೃತಕ್ಕೆ ತಕ್ಕ ಪ್ರೋತ್ಸಾಹವಿಲ್ಲ, ಸಾಕಷ್ಟು ಪ್ರಚಾರವಿಲ್ಲ, ಆದ್ದರಿಂದಿಲದರ ಮಹತ್ವ ಜನತೆಗೆ ಅರಿವಾಗಿಲ್ಲ ; ಎಲ್ಲ ಸಮಸ್ಯೆಗೂ ಪರಿಹಾರವಿರುವಂತೆ, ಸಂಸ್ಕೃತ ರಾಷ್ಟ್ರಭಾಷೆಯಾಗಲು ಅದಕ್ಕೂ ಪರಿಹಾರವಿದೆ (1) ಹಿಂದಿ ಭಾಷೆಯನ್ನು ರಾಷ್ಟ್ರಭಾಷೆಯನ್ನಾಗಿ ಮಾಡಲು ಪ್ರತಿರೋಧವನ್ನು ಸಂಸ್ಕೃತವೇ ಮಾಡುವುದು ; (2) ಪಾರ್ಶ್ವಗಳಲ್ಲಿ ಪಾರ್ಶ್ವತೀಯ ಭಾಷೆಗಳಲ್ಲಿ ಆಡಳಿತ ನಡೆಸಲು ಜರೂರಾದ ಆಜ್ಞೆಯನ್ನು ಕೊಡುವುದು. ಹಿಂದಿ ಭಾಷೆಯನ್ನು ರಾಷ್ಟ್ರಭಾಷೆಯಾಗಿ ಘೋಷಿಸಿದರೆ (ಹಿಂದಿ ಪ್ರದೇಶ ಬಿಟ್ಟು ಎಲ್ಲಾ ಕಡೆಯಲ್ಲಿಯೂ ಹಿಂದಿಯಲ್ಲಿಯೇ (ಕೇಂದ್ರದ ಮಟ್ಟದಲ್ಲಿ) ಆಡಳಿತ ನಡೆಸಲು ಸಾಧ್ಯವಿದೆ ಎನ್ನುವುದು ಸತ್ಯವಲ್ಲ : ಏಕೆಂದರೆ ಅದು ಹಿಂದಿ ಜನರಿಗೆ ಬಿಟ್ಟು ಬಾಕಿಯವರಿಗೆ ಅನ್ಯಭಾಷೆಯ ಸ್ಪೇಲಪರಿಚಿತ ಭಾಷೆಯಾಗಿದೆ. ಹಿಂದಿಯಲ್ಲಿ ಆಡಳಿತ ನಡೆಸುವಷ್ಟು ಸ್ವಾಭಿಮಾನ ಒಬ್ಬರಿಗೂ ಬರಿಗಾಲ ಭಾಷೆಯನ್ನು ಸಹ-ಭಾಷೆಯಾಗಿ ಮುಂದುವರಿಸುವ ಭರವಸೆ ಕೊಟ್ಟರೆ (ಸಂಸ್ಕೃತ ಭಾಷೆಯನ್ನು ರಾಷ್ಟ್ರಭಾಷೆಯನ್ನಾಗಿ ಘೋಷಿಸಿ ಸಂಸ್ಕೃತದಲ್ಲಿ ಆಡಳಿತ ನಡೆಸುವವರೆಗೂ, ಹಿಂದಿಗೆ ಪರಿಹಾರವಿರುವಂತೆ ' ಸಂಸ್ಕೃತಕ್ಕೂ ' ಏಕೆ ಪರಿಹಾರ ಕೊಡಬಾರದು ? ಹಿಂದಿ ಕಲಿಯುವ ಸ್ಪೇ ಸಮಯದಲ್ಲಿ ಸಂಸ್ಕೃತವನ್ನೇ ಏತಕ್ಕೆ ಕಲಿಸಬಾರದು (ಹಿಂದಿಗಿಂತಲೂ ಭವಾಗಿ ಮತ್ತು ಬೇಗ ಸಂಸ್ಕೃತ ಕಲಿಯಬಹುದು) ? ಇದಕ್ಕೆ ಹಿಂದಿಯೇ ರಾಷ್ಟ್ರಭಾಷೆಯಾಗಬೇಕೆನ್ನುವವರೂ ಸಹ ವಿರೋಧಿಸುವುದಿಲ್ಲ : ಬಾಕಿ ವ್ಯಾಪಾರವರ್ತಕರೂ ಸಮಸ್ಯೆಯೇ ಪರಿಹಾರವಾಯಿತೆಂದು ಅದರಿಂದ ಸ್ವಾಗತಿಸಬಹುದು ಎನ್ನುವುದರಲ್ಲಿ ಸಂದೇಹವೇ ಇಲ್ಲ : [ಕಡೇ ಭಾಗ ನಾಳೆ ಸಂಚಿಕೆಯಲ್ಲಿ

Help The GORAKSHANA

ಗೋರಕ್ಷಣೆಗೆ ಬೆಂಬಲ ನೀಡಿ

ಗೋರಕ್ಷಣ ಅಭಿಯಾನ ಜಾಥಾದಲ್ಲಿ ಭಾಗವಹಿಸಿ

ವುಡ್‌ಲಾಂಡ್ ನಲ್ಮೆಯ 5 ನೇ ವಾರ

ಪ್ರೇಕ್ಷಕರಿಂದ ಪಶಂಸೆ ಪಡೆಯುತ್ತಾ ವೈಭವವಾಗಿ ನಡೆಯುತ್ತಿದೆ

ಸುಂದರ ದೃಶ್ಯಕಳು, ಸಮುಧುರ ಸಂಗೀತ, ಆಕರ್ಷಣೀಯ ನೃತ್ಯಗಳು

ಹಾಸ್ಯವಿನೋದಗಳಿಂದ ಕೂಡಿದ ಈಸ್ಟ್‌ಮನ್ ಕಲರ್ ಚಿತ್ರ

ಜಾನವರ್ (ಹಿಂದಿ) Janwar

ನಿರ್ಮಾಪಕರು— ಶಮ್ಮಿ ಕಪೂರ್, ರಾಜಶ್ರೀ, ಪೃಥ್ವಿರಾಜ್, ರಾಜೇಂದ್ರನಾಥ್

ಅಪೇರ— 18—6—65 ರಿಂದ

ಎಂ. ಜಿ. ರಾಮಚಂದ್ರ — ಭಾನುಮತಿ ಅಭಿನಯಿಸಿರುವರು

ಮುಮ್ಮಯೋಗಿ

ಅಮೋಘ ಕಾಮಿಳು ಚಿತ್ರ ..... ಹೊಸ ಕಾಪಿ



ಉತ್ತಮ ಟಾನಿಕ್

SHAKTI
SUDHA

A Superb Tonin

Ed ted, printed and published by Dharma prachara nirata
[M s Ky shna Rao, at the Satyavadi Press
Chamarajapuram, Mysore 4